# ‘ಒಪ್ಪಂದದಂತೆ ಯಾವುದೂ ಆಗಲ್ಲ

**ಅಮೃತಾ ನಾಯ್ಡು**
**ಕಲರ್ಸ್ ಕನ್ನಡದ ‘ನಂದಗೋಕುಲ’ ಗಿರಿಜಾ**

■ ರಾಘವೇಂದ್ರ ಕೆ.



◆ **ಪಾತ್ರದ ಬಗ್ಗೆ ನಿಮಗೆ ಏನು ಅನ್ನಿಸುತ್ತದೆ?**

ತುಂಬ ವರ್ಷಗಳ ನಂತರ ಈ ರೀತಿಯ ಪಾತ್ರವನ್ನು ಮಾಡುತ್ತಿದ್ದೇನೆ. ಹತ್ತು ವರ್ಷಗಳ ಹಿಂದೆ ನೋಡುತ್ತಿದ್ದ ಧಾರಾವಾಹಿಯ ಅನುಭವವನ್ನು ಇದು ನೀಡುತ್ತಿದೆ. ‘ನಂದಗೋಕುಲ’ ಕುಟುಂಬ ಕೇಂದ್ರಿತ ಕಥೆ. ಆಡಂಬರ ಇಲ್ಲ. ಪೋಷಕರು ಮಕ್ಕಳನ್ನು ಬೆಳೆಸುವ ಮತ್ತು ಕುಟುಂಬ ಮೌಲ್ಯವನ್ನು ಗೌರವಿಸುವುದನ್ನು ಹೇಳುತ್ತದೆ. ನನ್ನ ತವರು ಮನೆಯವರಿಗೆ ನಮ್ಮ ಮೇಲೆ ಕೋಪ ಇದೆ. ಅಣ್ಣಂದಿರ ಆಶೀರ್ವಾದ ಪಡೆಯಬೇಕೆಂಬ ಬಯಕೆ ಇದೆ. ಅದಕ್ಕೆ ಅವಕಾಶವೇ ಆಗುವುದಿಲ್ಲ. ಅವರ ಮನಸಿಗೆ ಗಾಸಿಯಾಗಿದೆ. ಕ್ರಮೇಣ ಅದು ಮಾಯವಾಗಿ ಸರಿ ಹೋಗಬಹುದು.

◆ **ನೀವು ಕಂಡಂತೆ ಕಿರುತೆರೆಯಲ್ಲಿ ಆಗಿರುವ ಬದಲಾವಣೆ ಗುರುತಿಸಬಹುದಾ?**

ಈಗ ವೈಭವೀಕರಣಕ್ಕೆ ಹೆಚ್ಚು ಒತ್ತುಕೊಡುತ್ತೇವೆ ಎಂದು ಅನ್ನಿಸುತ್ತದೆ. ವೀಕ್ಷಕರು ಕೂಡ ಹಾಗೆಯೇ ಬಯಸುತ್ತಿದ್ದಾರೆ. ಈಗ ‘ನಿಮ್ಮದು ತುಂಬ ಡಲ್ ಪಾತ್ರ ಅಲ್ವಾ? ಸಿಂಪಲ್ಲಾಗಿದೆ’ ಎಂದು ಹೇಳುತ್ತಾರೆ. ಅವರಿಗೂ ಕಲರ್‌ಫುಲ್ ಇರಬೇಕು. ಬಡತನದ ಪಾತ್ರವಾಗಿದ್ದರೂ ಅಲಂಕಾರ, ಲಿಪ್‌ಸ್ಟಿಕ್ ಬೇಕೇ ಬೇಕು ಎನ್ನುವಂತೆ ಆಗಿದೆ. ಒಳ್ಳೆಯ ಸೀರೆಯನ್ನು ಉಟ್ಟುಕೊಂಡೇ ಇರಬೇಕು. ನೈಜತೆ ಕಡಿಮೆ ಆಗಿದ್ದು, ಎಲ್ಲ ಕಾಲ್ಪನಿಕವಾಗಿ ಸಾಗುತ್ತದೆ. ಮೊದಲು ಮನೆ ಮನೆಯ ಕಥೆ ಇರುತ್ತಿತ್ತು. ನೋಡುಗರಿಗೆ ಒಂದು ಪಾತ್ರ ಹೇಗಾದರೂ ಅನ್ವಯವಾಗುತ್ತಿತ್ತು. ಸೆಟ್‌ನಲ್ಲಿ ಆಗ ಹಿರಿಯ ಕಲಾವಿದರಿಗೆ ಗೌರವ ಇರುತ್ತಿತ್ತು. ಈಗ ಪ್ರಮುಖ ಪಾತ್ರ ನಿರ್ವಹಿಸುವವರಿಗೆ ಹೆಚ್ಚು ಪ್ರಾಮುಖ್ಯತೆ ಅನ್ನುವಂತೆ ಆಗಿದೆ.

ನಮ್ಮನ್ನು ಯಾರೂ ಆರಾಧಿಸುತ್ತಿಲ್ಲ. ಆದರೆ ನಾವು ಸೆಲೆಬ್ರಿಟಿ ಎಂದುಕೊಂಡಿದ್ದೇವೆ. ಇದನ್ನು ವೃತ್ತಿಯಾಗಿ ಆಯ್ಕೆ ಮಾಡಿಕೊಂಡು ಮಾಡುತ್ತಿದ್ದೇವೆ. ಕೃತಕತೆಯ ಆಕರ್ಷಣೆ ಕಲೆಯ ಪ್ರಾಮುಖ್ಯತೆಯನ್ನು ಕಡಿಮೆ ಮಾಡಿದೆ ಎಂದು ಅನ್ನಿಸುತ್ತದೆ.

◆ **ಹರಿಕಥೆ ಹೇಗೆ ನಿಭಾಯಿಸಲು ಸಾಧ್ಯ?**

ನನಗೆ ಈ ಎರಡು ಕಲೆಗಳು ಬೇರೆ ಬೇರೆ ಎಂದೇ ಅನ್ನಿಸುತ್ತದೆ. ನನ್ನ ತಂದೆ ‘ನೀನು ತೆರೆಯಲ್ಲಿ ಗುಂಪಿನಲ್ಲಿ ಗೋವಿಂದ ಆಗ್ತೀಯಾ. ಗುರುತಿಸುವಾಗ ಅಷ್ಟು ಜನರಲ್ಲಿ ಒಬ್ಬಳು ಎಂದು ಗುರುತಿಸುತ್ತಾರೆ. ಹರಿಕಥೆ ಆದರೆ ಹಾಗೆ ಆಗುವುದಿಲ್ಲ. ನಿಮ್ಮ ತಾತ ಹಾಕಿಕೊಟ್ಟ ಬುನಾದಿ ಭದ್ರವಾಗಿದೆ. ಇಲ್ಲಿ ಮನ್ನಣೆ ಸಿಗುತ್ತದೆ’ ಎಂದು ಹೇಳುತ್ತಿದ್ದರು. ಆಗ ಆಕರ್ಷಣೆಯೂ ಇತ್ತು. ತುಂಬ ವಿಚಾರವನ್ನು ತಿಳಿದುಕೊಳ್ಳಬೇಕಾಗುತ್ತದೆ. ಎಷ್ಟು ಕಲಿತರೂ ಕಡಿಮೆ. ತಿಂಗಳಲ್ಲಿ ಎರಡು ಕಾರ್ಯಕ್ರಮ ಈಗಲೂ ನಡೆಸಿಕೊಡುತ್ತೇನೆ. ಗುರುರಾಜ ನಾಯ್ಡು ಅವರ ಮೊಮ್ಮಗಳು ಹೇಳಿದ್ದನ್ನೇ ಹೇಳುತ್ತಾಳೆ ಎಂದು ಯಾವ ಪ್ರೇಕ್ಷಕರೂ ಅಂದುಕೊಳ್ಳಬಾರದು.

◆ **ನಿಮ್ಮ ಈ ಹಾದಿಯಲ್ಲಿ ನೋವು ನಲಿವುಗಳನ್ನು ಗುರುತಿಸಬಹುದಾ?**

ಕಿರುತೆರೆಯಲ್ಲಿ ಹೆಚ್ಚು ಸ್ನೇಹಿತರು ಇಲ್ಲ. ಯಾವುದೇ ಸೀರಿಯಲ್ ಮಾಡಿದರೂ ದೀರ್ಘಕಾಲ ಜೊತೆಗೆ ಇರುತ್ತೇವೆ. ಆ ಬಾಂಧವ್ಯ ಅಲ್ಲಿಗೆ ಸೀಮಿತವಾಗುತ್ತದೆ. ಕೆಲವು ವರ್ಷಗಳ ಹಿಂದೆ ನಾನು ಅತ್ಯಂತ ಬೇಸರದಲ್ಲಿ ಇದ್ದಾಗ ಅನೇಕರು ಬಂದು ಮಾತನಾಡಿಸಲಿಲ್ಲ. ಕೊನೆ ಪಕ್ಷ ಫೋನ್ ಮಾಡಲಿಲ್ಲ. ಅನೇಕರಿಗೆ ಇಂತಹ ಪರಿಸ್ಥಿತಿಯಲ್ಲಿ ಹೇಗೆ ನೋಡುವುದು ಎಂದು ಅನ್ನಿಸಿರಬಹುದು. ಇನ್ನೂ ಕೆಲವರಿಗೆ ಶೂಟಿಂಗ್ ಕಾರಣಕ್ಕೆ ಬರಲು ಅವಕಾಶ ಆಗಲಿಲ್ಲ. ಆಗ ಬೇಸರ ಅನ್ನಿಸಿತು. ಸಂಬಂಧಗಳೇ ತುಂಬ ವ್ಯಾವಹಾರಿಕ ಅನ್ನಿಸುತ್ತದೆ.

◆ **ಕಲೆಯ ಬದ್ಧತೆ ಮತ್ತು ವ್ಯವಹಾರದ ಅನಿವಾರ್ಯ ಇವೆರಡನ್ನೂ ಹೇಗೆ ನೋಡುತ್ತೀರಿ?**

ಇಷ್ಟು ಅವಧಿಯಲ್ಲಿ ಅಂತಹ ಪರಿಸ್ಥಿತಿಯನ್ನು ಎದುರಿಸಲಿಲ್ಲ. ಪ್ರತಿ ಕ್ಷೇತ್ರದಲ್ಲೂ ಇದೆಲ್ಲ ಇದ್ದೇ ಇರುತ್ತದೆ. ವೃತ್ತಿಪರವಾಗಿ ಸದ್ಯದ ಪರಿಸ್ಥಿತಿ ಹೇಳುವುದಾದರೆ ಸಮಯ, ಸಂಭಾವನೆ ಎಲ್ಲದನ್ನೂ ಮೊದಲೇ ಮಾತಾಡಿರುತ್ತೇವೆ. ಆದರೆ, ಅದು ಪ್ರಾಯೋಗಿಕವಾಗಿ ನಡೆಯುವುದಿಲ್ಲ. ದಿನ ನಾವು ಹೇಳಿದಂತೆ ಆಗುವುದೇ ಇಲ್ಲ. ತುರ್ತು ಸಂದರ್ಭದಲ್ಲಿ ರಜೆ ಬೇಕೆಂದರೂ ಸಿಗುವ ಸಾಧ್ಯತೆ ಕಡಿಮೆ. ಅಂತಹ ಸನ್ನಿವೇಶದಲ್ಲಿ ಒರಟಾಗಿ ನಡೆದುಕೊಳ್ಳಲೂ ನಮಗೆ ಸಾಧ್ಯ ಆಗುವುದಿಲ್ಲ. ಯಾರಾದರೂ ಒಂದು ವೇಳೆ ಒರಟಾಗಿ ವರ್ತಿಸಿದರೆ ಅವರು ಕಿರಿಕ್ ಎಂದು ಪ್ರಚಾರವಾಗುತ್ತದೆ. ಕೆಲವೊಮ್ಮೆ ಅನಗತ್ಯ ಗಾಸಿಪ್ ಹರಡುತ್ತವೆ. ಎಂತಹ ಸಂದರ್ಭದಲ್ಲಿಯೂ ಕಿರಿಕ್ ಪಾರ್ಟಿ ಆಗಬಾರದು. ಅಗ್ರಿಮೆಂಟ್ ಕೂಡ ಮಾಡಿಕೊಂಡಿರುತ್ತೇವೆ. ಅದು ನಿರ್ಮಾಣ ಸಂಸ್ಥೆಗೆ ಹೆಚ್ಚು ಅನುಕೂಲ ಆಗುವಂತೆ ಇರುತ್ತದೆ. ಒಟ್ಟಾರೆ ವೃತ್ತಿಪರತೆಯ ಪಾಲನೆ ಅನಿವಾರ್ಯ ಆಗುತ್ತೆ. ■